ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1615 (1739)

2) ಸದಸ್ಯರ ಹೆಸರು : ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನ ಸಭೆಯಿಂದ ಚುನಾಯಿತರಾದವರು)

3) ಉತ್ತರಿಸುವ ದಿನಾಂಕ : 22-03-2021

4) ಉತ್ತರಿಸುವವರು : ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಮಾನವ-ಪ್ರಾಣಿ ಸಂಘರ್ಷ ಪ್ರಕರಣಗಳು ಹೆಚ್ಚು ಹೆಚ್ಚು ವರದಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು)	ಬಂದಿದೆ. ಇತ್ತೀಚಿನ ವರ್ಷಗಳಲ್ಲಿ ಜನಸಂಖ್ಯೆ ಹೆಚ್ಚಳದಿಂದ ಹೆಚ್ಚಿನ ಅರಣ್ಯ ಪ್ರದೇಶಗಳನ್ನು ಆಹಾರ ಉತ್ಪಾದನೆಗಾಗಿ ಹಾಗೂ ವಾಣಿಜ್ಯ ತೋಟದ ಬೆಳೆಗಳಿಗಾಗಿ ಬಳಸಿಕೊಂಡು ಬಂದಿರುವುದರಿಂದ, ವನ್ಯಪ್ರಾಣಿಗಳು ವಾಸಿಸುವ ನೈಸರ್ಗಿಕ ಆವಾಸಸ್ಥಾನದ ಪ್ರದೇಶವು ಕಡಿಮೆಯಾಗಿರುತ್ತದೆ. ಇದರಿಂದ ಕಾಡಾನೆಗಳು ಹಿಂದಿನಿಂದಲೂ ಸಂಚರಿಸುತ್ತಿದ್ದ ದಾರಿಗಳಿಗೆ (ಮೊಗಸಾಲೆಗಳಿಗೆ) ಅಡಚಣೆಯುಂಟಾಗಿರುತ್ತದೆ ಹಾಗೂ ಅರಣ್ಯ ಪ್ರದೇಶಗಳ ಅಂಚಿನಲ್ಲಿರುವ ಖಾಸಗಿ ಜಮೀನುಗಳಲ್ಲಿ ಕಾಡಾನೆ ಒಳಗೊಂಡಂತೆ ಇತರೆ ವನ್ಯಪ್ರಾಣಿಗಳನ್ನು ಆಕರ್ಷಿಸುವ ಬೆಳೆಗಳಾದ ಭತ್ತ, ತೆಂಗು, ಬಾಳೆ, ಹಲಸು ಮತ್ತು ವಾಣಿಜ್ಯ ಬೆಳೆಗಳಿಗೆ ಆಕರ್ಷಿತಗೊಂಡು ಹಾವಳಿ ಮಾಡುತ್ತಿರುವುದು ಕಂಡು ಬಂದಿರುತ್ತದೆ.
ಆ)	ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ದಾಖಲಾದ ಮಾನವ-ಪ್ರಾಣಿ ಸಂಘರ್ಷ ಪ್ರಕರಣಗಳು ಎಷ್ಟು (ಪ್ರಾಣಿವಾರು ಸಾವು-ನೋವು ವಿವರ ನೀಡುವುದು)	ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಉಂಟಾದ ಮಾನವ ಗಾಯ, ಶಾಶ್ವತ ಅಂಗವಿಕಲತೆ ಮತ್ತು ಮಾನವ ಪ್ರಾಣಹಾನಿ ಪ್ರಕರಣಗಳ ವಿವರ ಈ ಕೆಳಗಿನಂತಿದೆ.

(ರೂ. ಲಕ್ಷಗಳಲ್ಲಿ)

ಪ್ರಕರಣ	2016-17		2017-18		2018-19		2019-20		2020-21 (ಫೆಬ್ರವರಿ-2021 ರ ವರೆಗೆ)	
	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
ಮಾನವ ಗಾಯ	130	26.00	204	67.8	138	52.40	122	48.80	103	42.14
ಮಾನವ ಶಾಶ್ವತ ಅಂಗ ವಿಕಲತೆ	5	4.16	4	7.02	3	6.37	4	16.60	2	11.47

ಮಾನವ ಪ್ರಾಣ ಹಾನಿ	49	235.00	35	175.00	26	75.00	50	282.50	37	277.50*
ಒಟ್ಟು:	184	265.00	243	249.82	167	134.00	176	348.00	142	331.00

* ಪ್ರಸಕ್ತ ಸಾಲಿನಲ್ಲಿ ಕೆಲವೊಂದು ಪ್ರಕರಣಗಳಲ್ಲಿ ಸೇರ್ಪಡೆ ಆದೇಶ ಇ-ಸಂಖ್ಯೆ: ಅಪಜೀ 98 ಎಫ್‌ಡಬ್ಲ್ಯೂಎಲ್ 2020, ದಿನಾಂಕ:02-01-2021 ರಂತೆ ಘಟನೆ ನಡೆದ ಕೂಡಲೇ ರೂ.2.00 ಲಕ್ಷಗಳ ದಯಾತ್ಮಕ ಧನ ಪಾವತಿಸಿ, ಉಳಿದ ಮೊತ್ತ ರೂ.5.50 ಲಕ್ಷಗಳನ್ನು ಅಗತ್ಯ ದಾಖಲೆಗಳು ಸಲ್ಲಿಕೆಯಾದ ನಂತರ ಕಾನೂನುಬದ್ಧ ವಾರಸುದಾರರಿಗೆ ಪಾವತಿಸಲಾಗುತ್ತಿದೆ.

ಮುಂದುವರೆದು, ವನ್ಯಪ್ರಾಣಿ ದಾಳಿಯಿಂದ ಉಂಟಾದ ಮಾನವ ಪ್ರಾಣಹಾನಿ (ಪ್ರಾಣಿವಾರು ವಿವರ) ಈ ಕೆಳಕಂಡಂತಿದೆ:

ವನ್ಯಪ್ರಾಣಿ	2016-17	2017-18	2018-19	2019-20	2020-21
ಆನೆ	38	22	12	29	21
ಹುಲಿ	-	-	03	02	04
ಚಿರತೆ	01	03	03	04	06
ಕರಡಿ	04	05	02	03	-
ಮೊಸಳೆ	03	02	03	03	03
ಕಾಡೆಮ್ಮೆ	01	01	01	05	-
ಇತರೆ	01	02	02	04	03
ಒಟ್ಟು:	**48**	**35**	**26**	**50**	**37**

ಇ)	ಮಾನವ-ಪ್ರಾಣಿ ಸಂಘರ್ಷದ ಪ್ರಕರಣಗಳಲ್ಲಿ ಸಾವು-ನೋವು ಸಂಭವಿಸಿದವರಿಗೆ ನೀಡುತ್ತಿರುವ ಪರಿಹಾರವೆಷ್ಟು; ಇದುವರೆವಿಗೂ ಎಷ್ಟು ಜನರಿಗೆ ಪರಿಹಾರ ನೀಡಲಾಗಿದೆ ಮತ್ತು ಬಾಕಿ ಉಳಿದಿರುವ ಪ್ರಕರಣಗಳು ಎಷ್ಟು;	ಸರ್ಕಾರದ ಆದೇಶ ಸಂಖ್ಯೆ: ಎಫ್‌ಇಇ 130 ಎಫ್‌ಡಬ್ಲ್ಯೂಎಲ್ 2016 ದಿನಾಂಕ: 19-09-2016 ರಲ್ಲಿ ಶಾಶ್ವತ ಅಂಗವಿಕಲತೆ ಉಂಟಾದಲ್ಲಿ ರೂ.5,00,000/-ಗಳ ದಯಾತ್ಮಕ ಧನವನ್ನು ಮತ್ತು ಭಾಗಶಃ ಅಂಗವಿಕಲತೆ ಹೊಂದಿದ್ದಲ್ಲಿ ರೂ.2,50,000/-ಗಳ ದಯಾತ್ಮಕ ಧನವನ್ನು ಅಂಗವಿಕಲ ವ್ಯಕ್ತಿಗೆ ನೀಡಲಾಗುತ್ತಿದೆ. ಮಾನವ ಗಾಯಗೊಂಡ ವ್ಯಕ್ತಿಗೆ ಗರಿಷ್ಠ ರೂ.30,000/-ಗಳ ದಯಾತ್ಮಕಧನ ಪಾವತಿಸಲಾಗುತ್ತಿದೆ. ಮಾನವ ಗಾಯ / ಭಾಗಶಃ ಅಂಗವಿಕಲಲತೆ / ಶಾಶ್ವತ ಅಂಗವಿಕಲತೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಸಂಖ್ಯೆ ಎಫ್‌ಇಇ 128 ಎಫ್‌ಡಬ್ಲ್ಯೂಎಲ್ 2013 ದಿನಾಂಕ: 15-05-2015 ರನ್ವಯ ದಯಾತ್ಮಕ ಧನದ ಜೊತೆಗೆ ವೈದ್ಯಕೀಯ ವೆಚ್ಚವನ್ನು ಸಿ.ಜಿ.ಹೆಚ್.ಎಸ್. ದರಗಳ ಪ್ರಕಾರ ಪಾವತಿಸಲಾಗುತ್ತದೆ. ಸರ್ಕಾರದ ಆದೇಶ ಸಂಖ್ಯೆ : ಅಪಜೀ 66 ಎಫ್‌ಡಬ್ಲ್ಯುಎಲ್ 2019, ದಿನಾಂಕ : 07-01-2020 ರಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಮಾನವ ಪ್ರಾಣ ಹಾನಿ ಪ್ರಕರಣಗಳಲ್ಲಿ ರೂ.7.50ಲಕ್ಷಗಳ

		ದಯಾತ್ಮಕ ಧನವನ್ನು ಪಾವತಿಸಲು ಅವಕಾಶವಿದ್ದು, ಸೇರ್ಪಡೆ ಆದೇಶ ಇ-ಸಂಖ್ಯೆ: ಅಪಜೀ 98 ಎಫ್‌ಡಬ್ಲ್ಯೂಎಲ್ 2020, ದಿನಾಂಕ:02-01-2021ರ ಸೇರ್ಪಡೆ ಆದೇಶದನ್ವಯ, ಘಟನೆ ನಡೆದ ಕೂಡಲೇ ರೂ.2.00ಲಕ್ಷಗಳನ್ನು ಪಾವತಿಸಿ, ಉಳಿದ ರೂ.5.50ಲಕ್ಷಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಹಂತದಲ್ಲಿ ವಿಚಾರಣೆ ನಡೆಸಿ, ಅಗತ್ಯವಿರುವ ಎಲ್ಲಾ ಅಧಿಕೃತ ದಾಖಲೆಗಳನ್ನು ಪಡೆದುಕೊಂಡು, ಅವುಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಂಡು, ಕಾನೂನುಬದ್ಧ ವಾರಸುದಾರರಿಗೆ ಬಿಡುಗಡೆಗೊಳಿಸಲಾಗುತ್ತಿದೆ. ಅಲ್ಲದೆ, ಸರ್ಕಾರಿ ಆದೇಶ ಸಂಖ್ಯೆ: ಎಫ್‌ಇಇ 61 ಎಫ್‌ಎಪಿ 2018 ದಿನಾಂಕ: 16-10-2018 ರಂತೆ ಮೃತರ ಕುಟುಂಬದ ವಾರಸುದಾರರಿಗೆ ಹಾಗೂ ಶಾಶ್ವತ ಅಂಗವಿಕಲತೆ ಪ್ರಕರಣಗಳಲ್ಲಿ ಸಂತ್ರಸ್ತರಿಗೆ 05 ವರ್ಷಗಳವರೆಗೆ ರೂ.2,000/-ಗಳ ಮಾಸಾಶನವನ್ನು ಸಹ ನೀಡಲಾಗುತ್ತಿದೆ. ಮಾನವ ವನ್ಯಪ್ರಾಣಿ ಸಂಘರ್ಷದಿಂದ ಉಂಟಾದ ಮಾನವ ಸಾವುನೋವು ಪ್ರಕರಣಗಳಿಗೆ ಪ್ರಶ್ನೆ (ಅ)ರಲ್ಲಿ ತಿಳಿಸಿರುವಂತೆ ದಯಾತ್ಮಕಧನವನ್ನು ಈಗಾಗಲೇ ಪಾವತಿಲಾಗಿರುತ್ತದೆ. ಮಾನವ ಗಾಯ, ಶಾಶ್ವತ ಅಂಗವಿಕಲತೆ ಹಾಗೂ ಮಾನವ ಪ್ರಾಣ ಹಾನಿ ಪ್ರಕರಣಗಳನ್ನು ಆದ್ಯತೆ ಮೇರೆಗೆ ಪರಿಗಣಿಸಲಾಗುವುದರಿಂದ ಯಾವುದೇ ಪ್ರಕರಣಗಳು ಬಾಕಿ ಇರುವುದಿಲ್ಲ.
ಈ)	ಬಾಕಿ ಉಳಿದಿರುವ ಪ್ರಕರಣಗಳಲ್ಲಿ ಪರಿಹಾರ ನೀಡಲು ವಿಳಂಬವಾಗುತ್ತಿರುವುದೇಕೆ? (ಕಾರಣ ನೀಡುವುದು)	2020-21ನೇ ಸಾಲಿಗೆ ವನ್ಯಪ್ರಾಣಿಗಳ ಉಂಟಾಗುವ ಹಾನಿ ಪ್ರಕರಣಗಳಿಗೆ ದಯಾತ್ಮಕ ಧನ ಪಾವತಿಸಲು ರೂ.1672.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ನಂತರ ಪುನರ್ ವಿನಿಯೋಗದ ಮೂಲಕ ರೂ.492.63ಲಕ್ಷಗಳನ್ನು ದಿನಾಂಕ: 12-03-2021 ರಲ್ಲಿ ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಅನುದಾನದಲ್ಲಿ ಬಾಕಿ ಉಳಿದಿರುವ ಪ್ರಕರಣಗಳಿಗೆ ದಯಾತ್ಮಕ ಧನವನ್ನು ಪಾವತಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಅಪಜೀ 72 ಎಫ್‌ಡಬ್ಲ್ಯೂಎಲ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು